*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 24.03.2026 ರ ಆದೇಶದ ಮೇರೆಗೆ ದಿನಾಂಕ 25.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ ಇ ಎಸ್ ವಕೀಲರಿಂದ:-</u>

22. ಹಾನ್ ಬಾಳುವಿನಿಂದ ಚಿಕ್ಕಮಗಳೂರಿಗೆ 70 ಕಿಲೋ ಮೀಟರ್ ದೂರವಾಗುತ್ತದೆ ಎಂದರೆ ಸಾಕ್ಷಿ ನನಗೆ ಕಿಲೋ ಮೀಟರ್ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಹಾನ್ ಬಾಳುವಿನಿಂದ ಚಿಕ್ಕಮಗಳೂರಿಗೆ ಪ್ರಯಾಣಿಸಲು 1 ವರೆಯಿಂದ 2 ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸಾಕ್ಷಿ 1 ರಿಂದ 1 ವರೆ ಗಂಟೆ ಸಾಕಾಗುತ್ತದೆ ಎನ್ನುತ್ತಾರೆ. ಹಾನ್ ಬಾಳುವಿನಿಂದ ದುರ್ಗದಹಳ್ಳಿಗೆ 70 ಕಿಲೋ ಮೀಟರ್ ದೂರವಾಗುತ್ತದೆ ಎಂದರೆ ಸರಿ. ಕೈಮರದಿಂದ ಹಾನ್ ಬಾಳುಗೆ 75 ಕಿಲೋ ಮೀಟರ್ ದೂರವಾಗುತ್ತದೆ ಎಂದರೆ ಸಾಕ್ಷಿ ಆಗಬಹುದೇನೋ ಎನ್ನುತ್ತಾರೆ. ಕೈಮರದಿಂದ ಕಬ್ಬಿನಹಳ್ಳಿಗೆ 1 ರಿಂದ 1 ವರೆ ಕಿಲೋ ಮೀಟರ್ ದೂರವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೈಮರದಿಂದ ಕಬ್ಬಿನಹಳ್ಳಿಗೆ ಹತ್ತಿರವಾಗುತ್ತದೆ ಎಂದರೆ ಸರಿ.

23. ದೂರನ್ನು ಯಾರಿಗೆ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿ ದೂರನ್ನು ಚಿಕ್ಕಮಗಳೂರು ರೂರಲ್ ಪೊಲೀಸರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಆ ದಿನ ಪೊಲೀಸರು ನಿಮ್ಮನ್ನು ಪ್ರಶ್ನಿಸಿದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅಲ್ಲಿ ಪೊಲೀಸರು ನಿಮ್ಮನ್ನು ಪ್ರಶ್ನಿಸಿದ ಬಳಿಕ ನಿಮ್ಮ ಹೆಬ್ಬೆರಳಿನ ಗುರುತನ್ನು ಪಡೆದುಕೊಂಡರು ಎಂದರೆ ಸರಿ. ಆರೋಪಿ ಪರ ವಕೀಲರು ಸಾಕ್ಷಿಗೆ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ದೂರಿನಲ್ಲಿರುವ ಹೆಬ್ಬೆರಳಿನ ಗುರುತನ್ನು ತೋರಿಸಿ ಆ ದಿನ ಪೊಲೀಸರು ನಿಮ್ಮನ್ನು ಪ್ರಶ್ನಿಸಿದ ಬಳಿಕ ಪಡೆದುಕೊಂಡ ನಿಮ್ಮ ಹೆಬ್ಬೆರಳಿನ ಗುರುತು ಅದೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಓದು ಬರಹ ಬರಲ್ಲ ಹಾಗಾಗಿ ಗೊತ್ತಿಲ್ಲ ಎನ್ನುತ್ತಾರೆ. ಹೆಬ್ಬೆರಳಿನ ಗುರುತನ್ನು ಹಾಕಿದಾಗ ಸಮಯ ಬೆಳಿಗ್ಗೆ 10.30 ರಿಂದ 11.00 ಗಂಟೆಯಾಗಿತ್ತು ಎಂದರೆ ಸಾಕ್ಷಿ ನಾನು ಆ ದಿನ ಠಾಣೆಗೆ ಹೋದಾಗ ಬೆಳಿಗ್ಗೆ 9.00 ಗಂಟೆಯಾಗಿತ್ತು, ಹೆಬ್ಬೆರಳಿನ ಗುರುತನ್ನು ಹಾಕಿದಾಗ ಬೆಳಿಗ್ಗೆ 9.30 ರಿಂದ 10.00 ಗಂಟೆಯಾಗಿರಬಹುದು ಎನ್ನುತ್ತಾರೆ.

24. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 1 ರಲ್ಲಿ 'ಆರೋಪಿ ಮನು ಗೊತ್ತು, ಆತ ನನ್ನ ಮಗನನ್ನು ಕಬ್ಬಿನಹಳ್ಳಿ ಎಸ್ಟೇಟಿಗೆ ಕೆಲಸಕ್ಕೆ ಕರೆದುಕೊಂಡು ಹೋಗಿದ್ದನು.' ಎಂದು ಹೇಳಿದ್ದೀರಿ ಸದರಿ ವಿಚಾರವನ್ನು ನೀವು ನೀಡಿದ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಗಾಬರಿಯಲ್ಲಿ ತಿಳಿಸದೇ ಇರಬಹುದು ಎನ್ನುತ್ತಾರೆ.

25. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ 'ಸದರಿ ಮನೆಯಲ್ಲಿ ನಾನು, ನನ್ನ ಹೆಂಡತಿಯಾದ ಚಾಸಾ.7 ಮತ್ತು ನನ್ನ ಹಿರಿಯ ಮಗನಾದ ಶೇಷಪ್ಪ ವಾಸವಾಗಿದ್ದೆವು.' ಎಂದು ಹೇಳಿದ್ದೀರಿ ಸದರಿ ವಿಚಾರವನ್ನು ನೀವು ಹಿಂದೆ ಪೊಲೀಸರಿಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ.

26. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ 'ನಂತರ ಶೇಷಪ್ಪ ತನ್ನನ್ನು ಆರೋಪಿ ಕಬ್ಬಿನಹಳ್ಳಿ ಎಸ್ಟೇಟಿಗೆ ಕರೆದುಕೊಂಡು ಹೋಗಿ ಕೆಲಸಕ್ಕೆ ಸೇರಿಸಿರುವುದಾಗಿ ತಿಳಿಸಿದನು. ಈಗ್ಗೆ 3 ವರ್ಷಗಳ ಹಿಂದೆ ನನ್ನ ಮಗ ಶೇಷಪ್ಪ ನನಗೆ ಫೋನ್ ಮಾಡಿ ಆ ರೀತಿ ಆರೋಪಿ ಆತನನ್ನು ಕಬ್ಬಿನಹಳ್ಳಿ ಎಸ್ಟೇಟಿಗೆ ಕೆಲಸಕ್ಕೆ ಸೇರಿಸಿರುವುದಾಗಿ ಹೇಳಿದ್ದನು.' ಎಂದು ಹೇಳಿದ್ದೀರಿ ಸದರಿ ವಿಚಾರವನ್ನು ನೀವು ಹಿಂದೆ ಪೊಲೀಸರಿಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ.

27. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 3 ರಲ್ಲಿ 'ಅದಾದ 1 ತಿಂಗಳಿಗೆ ಕಬ್ಬಿನಹಳ್ಳಿ ಎಸ್ಟೇಟಿನ ಮಾಲೀಕರು ನನಗೆ ಫೋನ್ ಮಾಡಿ ನಿಮ್ಮ ಮಗ ಶೇಷಪ್ಪನಿಗೆ ಹುಷಾರಿಲ್ಲ ನೀವು ಬರಬೇಕು ಎಂದು ಹೇಳಿದರು. ಆ ರೀತಿ ಅವರು ಫೋನ್ ಮಾಡಿದಾಗ ಸಮಯ ರಾತ್ರಿ 9.00 ಗಂಟೆಯಾಗಿತ್ತು. ಹಾಗಾಗಿ ನಾನು ಮಾರನೇ ದಿನ ಬೆಳಿಗ್ಗೆ 9.00 ಗಂಟೆಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದೆನು.' ಎಂದು ಹೇಳಿದ್ದೀರಿ ಸದರಿ ವಿಚಾರವನ್ನು ನೀವು ಹಿಂದೆ ಪೊಲೀಸರಿಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ. ಆ ಸಮಯದಲ್ಲಿ ನಾನು ಹಾನ್

ಬಾಳುವಿನಲ್ಲಿರುವ ಚಂದ್ರಮೌಳಿ ಎಂಬುವವರ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡಿದ್ದೆನು. ಆ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಮಗ ಮೃತಪಟ್ಟ ಸಮಯದಲ್ಲಿ ನೀವು ಹಾನ್ ಬಾಳ್ ವಿನಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ.

28. ನೀವು ದೂರು ನೀಡಲು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಪ್ರಾಸಾ.8, ಪ್ರಾಸಾ.9 ಮತ್ತು ಆರೋಪಿ ಇದ್ದರು ಎಂದರೆ ಸರಿಯಲ್ಲ. ಆ ದಿನ ನೀವು ಪ್ರಾಸಾ.8 ಮತ್ತು ಪ್ರಾಸಾ.9 ರವರನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ದಿನ ನೀವು ಆರೋಪಿಯನ್ನೂ ಸಹ ನೋಡಿದ್ದೀರಿ ಎಂದರೆ ಸರಿಯಲ್ಲ. ನೀವು ದೂರು ನೀಡಲು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಪ್ರಾಸಾ.8, ಪ್ರಾಸಾ.9 ಮತ್ತು ಆರೋಪಿ ಇದ್ದರೂ ಸಹ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

29. ಚಿಕ್ಕಮಗಳೂರು ರೂರಲ್ ಪೊಲೀಸ್ ಠಾಣೆಗೆ ನಿಮ್ಮನ್ನು ಯಾರು ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ಪ್ರಾಸಾ.4 ರಮೇಶ್ ರವರು ಕರೆದುಕೊಂಡು ಹೋಗಿದ್ದರು ಎನ್ನುತ್ತಾರೆ. ನೀವೂ ಸಹ ಪ್ರಾಸಾ.8 ಮತ್ತು ಪ್ರಾಸಾ.9 ರವರ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದಿರಿ ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಮಗನ ಹೆಸರು ಸುರೇಶ. ಆತನನ್ನು ಕೊಲೆ ಮಾಡಿದ ವ್ಯಕ್ತಿಗಳಿಂದ ಶೇಷಪ್ಪನನ್ನು ರಕ್ಷಿಸುವ ಸಲುವಾಗಿ ನೀವೇ ಆತನನ್ನು ಪ್ರಾಸಾ.8 ಮತ್ತು ಪ್ರಾಸಾ.9 ರವರ ಎಸ್ಟೇಟಿನಲ್ಲಿ ಇರಿಸಿದ್ದಿರಿ ಎಂದರೆ

ಸರಿಯಲ್ಲ. ಫ್ರಾಸಾ.8 ಮತ್ತು ಫ್ರಾಸಾ.9 ರವರಿಗೆ ಸಹಾಯ ಮಾಡುವ ಸಲುವಾಗಿ ನೀವು ಅವರ ಎಸ್ಟೇಟಿನಲ್ಲಿ ಇರಲಿಲ್ಲ ಬದಲಿಗೆ ಹಾನ್ ಬಾಳುವಿನಲ್ಲಿರುವ ಎಸ್ಟೇಟಿನಲ್ಲಿ ಇದ್ದೆನು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಸಮಕ್ಷಮದಲ್ಲಿಯೇ ಫ್ರಾಸಾ.8 ಮತ್ತು ಫ್ರಾಸಾ.9 ರವರ ಮಾತನ್ನು ಕೇಳಿ ಅವರು ಹೇಳಿದ ಕಡೆಗೆ ನಿಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ. ಅವರು ಫೋನ್ ಮಾಡಿದ ನಂತರ ನೀವು ಸ್ಥಳಕ್ಕೆ ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ